ಕರ್ನಾಟಕ ಸರ್ಕಾರ

ಖಜಾನೆ ಇಲಾಖೆ

ಖಜಾನೆ ಆಯುಕ್ತರ ಕಚೇರಿ, 5 & 6ನೇ ಮಹಡಿ, ಕೆ.ಪಿ.ಸಿ.ಎಲ್ ಹಸಿರು ಕಟ್ಟಡ , ಅರಮನೆ ರಸ್ತೆ, ಬೆಂಗಳೂರು -01.

ಸಂ: ಖನಿ /ಪಿಂಚಣಿ/112/2022-23 ದಿನಾಂಕ: 16.10.2023

# ಸುತ್ತೋಲೆ

ವಿಷಯ: ಪಿಂಚಣಿದಾರರಿಗೆ ಬೆರಳಚ್ಚು ಆಧರಿತ ಡಿಜಿಟಲ್ ಜೀವನ ಪ್ರಮಾಣ ಪತ್ರದ ಸೌಲಭ್ಯದ ಕುರಿತು

ಉಲ್ಲೇಖ: ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ನೊಂದಿಗಿನ ದಿನಾಂಕ 29.11.2022ರ ಒಪ್ಪಂದ (MoU).

*******

1. ಪಿಂಚಣಿದಾರರು ವಾರ್ಷಿಕ ಜೀವಿತ ಪ್ರಮಾಣ ಪತ್ರವನ್ನು ಸಲ್ಲಿಸಲು ಸಾಧ್ಯವಾಗುವಂತೆ, ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ನವರು, ಬೆರಳಚ್ಚು ಆಧಾರಿತ ಡಿಜಿಟಲ್ ಜೀವನ ಪ್ರಮಾಣ ಪತ್ರದ ಸೌಲಭ್ಯವನ್ನು ರೂ 70/- ರ ಶುಲ್ಕದೊಂದಿಗೆ, ಪಿಂಚಣಿದಾರರ ಹತ್ತಿರದ ಅಂಚೆ ಕಚೇರಿಯಲ್ಲಿ ಅಥವಾ ಮನೆ ಬಾಗಿಲಲ್ಲಿ ಲಭ್ಯಗೊಳಿಸುತ್ತಿದ್ದು ಈ ಕುರಿತು ಖಜಾನೆ ಇಲಾಖೆ ಹಾಗೂ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ನಡುವೆ ಒಪ್ಪಂದವೊಂದು (MoU) ಸಹಿಯಾಗಿರುತ್ತದೆ.

2. ಮೇಲ್ಕಂಡ ಒಪ್ಪಂದದಲ್ಲಿ ಅವಕಾಶವಿರುವಂತೆ, ಈ ಸೌಲಭ್ಯದ ಕುರಿತು ವ್ಯಾಪಕ ಪ್ರಚಾರ ನೀಡಲು, ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ರವರು ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಭಿತ್ತಿಪತ್ರಗಳನ್ನು (Posters) ಬಿಡುಗಡೆ ಮಾಡಿದ್ದು, ಅವುಗಳನ್ನು ರಾಜ್ಯದ ಖಜಾನೆಗಳಲ್ಲಿ ಪ್ರದರ್ಶಿಸಲು ಅನುಮತಿ ಕೋರಿರುವ ಮೇರೆಗೆ, ಖಜಾನೆ ಆಯುಕ್ತಾಲಯದಿಂದ ಅನುಮತಿ ನೀಡಲಾಗಿದೆ.( ಭಿತ್ತಿಪತ್ರದ (Posters) ಪ್ರತಿ ಲಗತ್ತಿಸಿದೆ.)

3. ಆದುದರಿಂದ, ಸದರಿ ಭಿತ್ತಿಪತ್ರಗಳನ್ನು ಖಜಾನೆಗಳ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸಲು(ಅಂಟಿಸಲು) ಕ್ರಮ ವಹಿಸುವಂತೆ ಸೂಚಿಸಿದೆ.

20/10/23

ಖಜಾನೆ ಆಯುಕ್ತರು
ಬೆಂಗಳೂರು

ರಾಜ್ಯದ ಎಲ್ಲಾ ಖಜಾನೆಗಳ ಪ್ರಭಾರಾಧಿಕಾರಿಗಳಿಗೆ

ಪ್ರತಿ:

1) ಅಪರ ಮುಖ್ಯಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2) ಹಿರಿಯ ವ್ಯವಸ್ಥಾಪಕರು, BDEG, ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಇವರ ಮಾಹಿತಿಗಾಗಿ.
3) ಸಹಾಯಕ ನಿರ್ದೇಶಕರು,ಖಜಾನೆ 2 ಪಿಎಂಯು ರವರಿಗೆ ಖಜಾನೆ ಜಾಲದಲ್ಲಿ ಪ್ರಕಟಿಸಲು.

ಇंडिया पोस्ट पेमेन्ट्स बैंक | India Post Payments Bank

# ಬೆರಳಚ್ಚು - ಆಧಾರಿತ
# ಡಿಜಿಟಲ್ ಜೀವನ ಪ್ರಮಾಣ ಪತ್ರ
## ಪಿಂಚಣಿದಾರರಿಗಾಗಿ

- ☑ ಕೇವಲ ಆಧಾರ್ ಧೃಢೀಕರಣದೊಂದಿಗೆ **ಸಂಪೂರ್ಣ ಕಾಗದ ರಹಿತ** ಡಿಜಿಟಲ್ ಜೀವನ ಪ್ರಮಾಣ ಪತ್ರ ಮಾಡಿಕೊಡಲಾಗುವುದು.
- ☑ ಪೋಸ್ಟ್ ಮ್ಯಾನ್ ಅಥವಾ ಹತ್ತಿರದ ಅಂಚೆ ಕಛೇರಿಯ ಮೂಲಕ ನಿಮ್ಮ ಮನೆ ಬಾಗಿಲಿನಲ್ಲೇ ಡಿಜಿಟಲ್ ಜೀವನ ಪ್ರಮಾಣ ಪತ್ರದ **ತ್ವರಿತ ವಿತರಣೆ**.
- ☑ ಪಿಂಚಿಣಿ ಇಲಾಖೆ ಅಥವಾ ಬ್ಯಾಂಕ್‌ಗಳಿಗೆ **ಪ್ರಯಾಣಿಸುವ ಅಗತ್ಯವಿಲ್ಲ**. ಡಿಜಿಟಲ್ ಜೀವನ ಪ್ರಮಾಣಪತ್ರದ ವಿವರಗಳನ್ನು **ನೇರವಾಗಿ ಪಿಂಚಣಿ ಇಲಾಖೆಯೊಂದಿಗೆ ನವೀಕರಿಸಲಾಗುವುದು.**
- ☑ **ರೂ. 70 ರ ಅತ್ಯಲ್ಪ ಶುಲ್ಕದಲ್ಲಿ** ಸೇವೆಗಳು ಲಭ್ಯವಿವೆ (ತೆರಿಗೆ ಸಹಿತ).

## ಡಿಜಿಟಲ್ ಜೀವನ ಪ್ರಮಾಣಪತ್ರ ಈಗ ನಿಮ್ಮ ಹತ್ತಿರದ ಅಂಚೆ ಕಛೇರಿ ಅಥವಾ ಮನೆ ಬಾಗಿಲಲ್ಲಿ ಲಭ್ಯವಿದೆ.

ಮನೆ ಬಾಗಿಲಿನ ಸೇವೆಯನ್ನು ಪಡೆಯಲು
ಈ ಕ್ಯುಆರ್ ಕೋಡ್ ಅನ್ನು ಸ್ಕ್ಯಾನ್
ಮಾಡಿ ವಿನಂತಿಯನ್ನು ಸಲ್ಲಿಸಿ.



ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ

ಮನೆ ಬಾಗಿಲಿನ ಸೇವೆಗಾಗಿ ಪೋಸ್ಟ್ ಮ್ಯಾನ್/ ಗ್ರಾಮೀಣ ಅಂಚೆ ಸೇವಕರನ್ನು
ಸಂಪರ್ಕಿಸಿ ಅಥವಾ ಪೋಸ್ಟ್ ಇನ್ಫೋ ಅಪ್ಲಿಕೇಶನ್ ನಲ್ಲಿ ನಿಮ್ಮ ವಿನಂತಿಯನ್ನು ಸಲ್ಲಿಸಿ.

Follow us on: @ippbonline | India Post Payments Bank | www.ippbonline.com

इंडिया पोस्ट पेमेन्ट्स बैंक | India Post Payments Bank

# BIOMETRIC-ENABLED DIGITAL LIFE CERTIFICATE FOR PENSIONERS

- **Completely paperless** issuance of Digital Life Certificate with Aadhaar authentication.
- **Instant issuance of Certificate** at your doorstep through Postman or at Post Office near you.
- **No need for travel** to Pension Department/ Banks, Digital Life Certificate details are **directly updated** with the department.
- Services available at **a nominal fee of Rs. 70**(inclusive of taxes).

## Digital Life Certificate now available at your nearest Post Office or doorstep

Scan QR code to submit doorstep request



*T&C apply

**For doorstep service, contact Postman/ Gramin Dak Sevak or submit your request on Postinfo app**

Follow us on: @ippbonline | India Post Payments Bank | www.ippbonline.com